



# ಇಗೊಲೊ ಸೈಕಲ್

■ ರೂಪಾ ಕೆ.ಎಂ.

ಶಿಖರಗಳಲ್ಲಿಯೇ ವಾಸಿಸುವ ದೊಡ್ಡ ಬುಡಕಟ್ಟು ಸಮುದಾಯ ಇಗೊಲೊ ಗ್ಯಾರೊನ್ನಲಿನ ಸದಸ್ಯರೆಲ್ಲರೂ ಗಾಢ ಕೆಂಬಣ್ಣದ ಸಾಂಪ್ರದಾಯಿಕ ಉಡುಗೆ ತೊಟ್ಟು, ಫಿಲಿಫೈನ್ಸ್ ಬೆಟ್ಟದ ತಪ್ಪಲಿನಿಂದ ಬೈಸಿಕಲ್ ಸವಾರಿ ಹೊರಟರು. ನೋಡನೋಡುತ್ತಿದ್ದಂತೆ ಅದೊಂದು ಅನೌಪಚಾರಿಕ ಜಾಥಾ ಆಗಿ ಪರಿವರ್ತನೆಗೊಂಡಿತ್ತು.

ದೂರದಿಂದ ಬರುತ್ತಿದ್ದ ಅವರನ್ನು ಕಂಡು ಯಾವುದೋ ವಿಶೇಷ ಕಾರಣಕ್ಕೆ ಸವಾರಿ ಹೊರಟಿರಬೇಕೆಂದು ಜನ ಕ್ಷಣಕಾಲ ಅತ್ತ ಕಡೆ ನೋಡಿದರು. ನೋಟ ಸ್ಪಷ್ಟವಾದಂತೆ ಕಣ್ಣರಳಿಸಿದರು. ಅವರು ಏರಿ ಬರುತ್ತಿದದ್ದು ಸಿಂಹ, ಆನೆ, ಹುಲಿ, ಡ್ರ್ಯಾಗನ್, ಕುದುರೆ – ಹೀಗೆ ನಾನಾ ಪ್ರಾಣಿಗಳ ಮುಖಗಳಿರುವ ಬೈಸಿಕಲ್‌ಗಳಲ್ಲಿ. ಕುತೂಹಲದ ಕಣ್ಣಾದ ಜನರತ್ತ ಕೈ ಬೀಸಿದ ಬುಡಕಟ್ಟು ಸಮುದಾಯದ ಯುವಕರು ಗೆಲುವಿನ ನಗೆಯನ್ನು ಚೆಲ್ಲುತ್ತ ಮುಂದೆ ಸಾಗಿದರು.

ಅತ್ಯಾಧುನಿಕ ತಂತ್ರಜ್ಞಾನದ ಎಲೆಕ್ಟ್ರಿಕಲ್ ಬೈಕ್‌ಗಳು, ಸೈಕಲ್‌ಗಳು, ಮೋಟಾರ್ ಸೈಕಲ್‌ಗಳು, ಸ್ಕೂಟರ್‌ಗಳು ಮಾರುಕಟ್ಟೆಗೆ ಬರುತ್ತಿರುವ ಈ ಹೊತ್ತಿನಲ್ಲಿ ಫಿಲಿಫೈನ್ಸ್‌ನ ಬುಡಕಟ್ಟು ಸಮುದಾಯದ ಯುವಕರು ಮರದಲ್ಲಿ ಬೈಸಿಕಲ್ ತಯಾರಿಸಿ, ಎಲ್ಲರಲ್ಲೂ ಅಚ್ಚರಿ ಮೂಡಿಸಿದ್ದಾರೆ. ಅದನ್ನು ಜಗಜ್ಜಾಹೀರಗೊಳಿಸುವ ಸಲುವಾಗಿ ಈ ಬೈಸಿಕಲ್ ನಿರ್ಮಾತೃಗಳು ಅಂಥದ್ದೊಂದು ಸವಾರಿ ಹೊರಟು ತಮ್ಮ ಖುಷಿಯನ್ನು ಹಂಚಿಕೊಂಡರು.

ಪ್ರಕೃತಿಯಲ್ಲೇ ದೇವರನ್ನು ಕಾಣುವ ಇಗೊಲೊ ಗ್ಯಾರೊನ್ನಲಿನ ಸಮುದಾಯವು – ಕಲ್ಲು, ಮಣ್ಣು, ಮರ, ಎಲ್ಲದರಲ್ಲೂ ದೇವರು ನೆಲೆಸಿದ್ದಾನೆ ಮತ್ತು ಅವನು ಸೃಜನಶೀಲತೆಯ ಪ್ರತೀಕ ಎಂದು ನಂಬಿರುವವರು. ಅಚ್ಚುಕಟ್ಟಾದ, ವಿಶಿಷ್ಟ ಶೈಲಿಯ ಮರದ ಕೆತ್ತನೆ ಕೆಲಸಕ್ಕೆ ಹೆಸರುವಾಸಿಯಾದ ಆ ಸಮುದಾಯ ಸದಾ ಹೊಸತನಕ್ಕೆ ತುಡಿಯುತ್ತದೆ. ಸಮಾಜಕ್ಕೆ ಏನಾದರೊಂದು ಹೊಸ ಕೊಡುಗೆ ನೀಡಬೇಕೆಂಬ ಕಾರಣಕ್ಕೆ ಈ ಬೈಸಿಕಲ್ ಅನ್ನು ಶೇ. 100ರಷ್ಟು ಮರದಿಂದಲೇ ರೂಪಿಸಿ ಸೈ ಅನಿಸಿಕೊಂಡಿದೆ.

ಗಂಟೆಗೆ 25 ಕಿ.ಮೀ. ವೇಗದಲ್ಲಿ ಚಲಿಸಬಲ್ಲ ಈ ಬೈಸಿಕಲ್‌ಗೆ ಗೇರಿಲ್ಲ. ಬ್ರೇಕ್ ಅಂತೂ ಮೊದಲೇ ಇಲ್ಲ. ಜನಸಂದಣಿ ಇರುವ ಪ್ರದೇಶದಲ್ಲಿ ಸವಾರಿ ಹೊರಟರೂ ಹೆಲ್ಮೆಟ್ ಧರಿಸಬೇಕೆಂದಿಲ್ಲ. ಈ ಬೈಸಿಕಲ್ ಅನ್ನು ನಿಲ್ಲಿಸಬೇಕಾದರೆ ಮರದ ಪೆಡಲ್ ಮೇಲೆ ಕಾಲಿಟ್ಟರೆ ಟೈರ್ ತಾನಾಗಿಯೇ ನಿಲ್ಲುತ್ತದೆ. ಪುನರ್ ಬಳಕೆಯಾಗಬಲ್ಲ ಟೈರ್‌ಗಳನ್ನು ಬಳಸಲಾಗಿದೆ. ಫ್ಯಾಂಟಸಿ ಸವಾರಿಗೆ ತಕ್ಕನಾದ, ಕುಸುರಿ ಕಲೆ ಮೇಲೆ ಮಾತ್ರ ಗಮನವಿರಿಸಿ ಈ ಮರದ ಬೈಸಿಕಲ್‌ಗಳು ರೂಪುಗೊಂಡಿವೆ.

ಸದ್ಯಕ್ಕೆ ಇದರ ಬಾಹ್ಯ ಸೌಂದರ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಇದರ ಗುಣಮಟ್ಟವನ್ನು ಇನ್ನಷ್ಟು ಎತ್ತರಿಸುವ ಇರಾದೆಯೂ ಆ ಯುವಕರಿಗಿದೆ. ಸಾಧ್ಯವಾದರೆ ಇಂತಹುದೇ ಇನ್ನಷ್ಟು ಬೈಸಿಕಲ್ ತಯಾರಿಸಿ, ಉಳಿದ ಹಳ್ಳಿಯ ಜನರಿಗೂ ನೀಡುವ ಆಸೆಯನ್ನು ಇಟ್ಟುಕೊಂಡಿದ್ದಾರೆ.

ಬಗೆ ಬಗೆಯ ಮರಗಳನ್ನು ಬಳಸಿ ವಾಹನ ರೂಪಿಸಿರುವ ಅವರು ಜನರಲ್ಲಿ ಬೈಸಿಕಲ್‌ನೆಡೆಗೆ ಇದ್ದ ಮೋಹವನ್ನಂತೂ ಅವರು ಹೆಚ್ಚಿಸಿದ್ದಾರೆ. ■